ಎಂ.ಎಲ್.ಎ. ಆಗಿದ್ದ ಗುಂಡನನ್ನು ಕಾರ್ ಶೋರೂಂ ಉದ್ಘಾಟನೆಗೆ ಕರೆದಿದ್ದರು. ಉದ್ಘಾಟನೆ ಎಲ್ಲಾ ಆದ ಮೇಲೆ ಗುಂಡನಿಗೆ ಒಂದು ಬೆಲೆ ಬಾಳುವ ಕಾರ್ ಗಿಫ್ಟ್ ನೀಡಿದರು. ಆಗ ಗುಂಡ, 'ನನ್ನದೇ ಆದ ಕೆಲವು ಪ್ರಿನ್ಸಿಪಲ್ಸ್ ಇವೆ. ಹಾಗೆಲ್ಲ ನಾನು ಯಾರಿಂದಲೂ ಗಿಫ್ಟ್ ತಗೋಳಲ್ಲ' ಎಂದು ಹೇಳಿದ. ಒತ್ತಾಯ ಮಾಡಿದರೂ ಕೇಳದ ಗುಂಡನಿಗೆ ಶೋರೂಂ ಮಾಲೀಕ ಹೇಳಿದ, 'ಹಾಗಾದ್ರೆ ನೀವು ಸಾವಿರ ರೂಪಾಯಿ ಕೊಟ್ಟು ತಗೊಳ್ಳಿ. ನೀವು ದುಡ್ಡು ಕೊಟ್ಟ ಹಾಗೂ ಇರುತ್ತೆ, ನಾವು ಗಿಫ್ಟ್ ಕೊಟ್ಟ ಹಾಗೂ ಆಗುತ್ತೆ' ಅಂತ. ಆಗ ಗುಂಡ ಸ್ವಲ್ಪ ಹೊತ್ತು ಯೋಚನೆ ಮಾಡಿ ಹೇಳಿದ, 'ಸರಿ ಹಾಗಾದ್ರೆ ನಾನು ಎರಡು ಸಾವಿರ ರೂಪಾಯಿ ಕೊಡ್ತೀನಿ. ನನಗೆ ಎರಡು ಕಾರ್ ಕೊಡಿ'...

**ಬಂಟಿ:** ಸರ್ ಇದೇನು?
**ಮೇಷ್ಟ್ರು:** ಪ್ರಶ್ನೆಪತ್ರಿಕೆ.
**ಬಂಟಿ:** ಮತ್ತೆ ಇದೇನು ಸಾರ್?
**ಮೇಷ್ಟ್ರು:** ಉತ್ತರ ಪತ್ರಿಕೆ.
**ಬಂಟಿ:** ಇದೇನು ಸಾರ್ ಅನ್ಯಾಯ, ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳಿವೆ. ಉತ್ತರ ಪತ್ರಿಕೆ ಖಾಲಿ ಇದೆಯಲ್ಲ!

***

ಸೆಕ್ಯುರಿಟಿ ಗಾರ್ಡ್ ಹುದ್ದೆಗೆ ಸಂದರ್ಶನ ನಡೆಯುತ್ತಿತ್ತು.
**ಸಂದರ್ಶಕ:** ನಿಮಗೆ ಇಂಗ್ಲಿಷ್ ಬರುತ್ತಾ?
**ಗುಂಡ:** ಸಾರ್, ಕಳ್ಳರು ಅಮೇರಿಕದಿಂದ ಬರ್ತಾರಾ?

***

**ಹೆಂಡತಿ:** ರೀ, ಈ ಕಂಪ್ಯೂಟರ್ ನಾನು ಹೇಳಿದ ಹಾಗೆ ಕೆಲಸ ಮಾಡ್ತಿಲ್ಲ ಕಣ್ರೀ...
**ಗಂಡ:** ಅದು ಕಂಪ್ಯೂಟರ್ ಅಷ್ಟೆ ಕಣೇ, ನಿನ್ನ ಗಂಡ ಅಲ್ಲ.




ಇಲ್ಲ ಚಿನ್ನಾ... ಇವತ್ತು ಪೇಪರ್ ಬಂದಿಲ್ಲಾ!

***

**ಬಾಸ್:** ಯಾಕ್ರಿ ನಿನ್ನೆ ಕೆಲಸಕ್ಕೆ ಬರಲಿಲ್ಲ?
**ಗುಂಡ:** ಕ್ಯಾಲೆಂಡರ್‌ನಲ್ಲಿ ರೆಡ್‌ಮಾರ್ಕ್ ತೋರಿಸುತ್ತಿತ್ತು. ಅದಕ್ಕೆ ರಜೆ ದಿನ ಅಂದುಕೊಂಡು ಬರಲಿಲ್ಲ ಸರ್. ಸಂಜೆ ಗೊತ್ತಾಯಿತು ಅದು ಹೊಸ ಕ್ಯಾಲೆಂಡರ್‌ಗೆ ಪೂಜೆ ಮಾಡಿ ಅಜ್ಜಿ ಹಚ್ಚಿದ ಕುಂಕುಮದ ಬೊಟ್ಟು ಅಂತ.

***

**ಅತ್ತೆ:** ಮದುವೆ ಮೆರವಣಿಗೆಯಲ್ಲಿ ನಿಮ್ಮ ಫ್ರೆಂಡ್ಸ್ ಹುಚ್ಚೆದ್ದು ಕುಣಿಯುತ್ತಿದ್ದಾರಲ್ಲ, ಯಾಕೆ?
**ಮದುಮಗ:** ಯಾಕಂದ್ರೆ ನಾನೇ ಹೇಳಿದ್ದೆ, ವರದಕ್ಷಿಣೆ ಹಣದಿಂದ ನಿಮ್ಮ ಸಾಲವೆಲ್ಲ ತೀರಿಸ್ತೀನಿ ಅಂತ ಅತ್ತೆಯವರೇ...

***

**ಸುಬ್ಬಿ:** ದೇವರು ಇದ್ದಕ್ಕಿದ್ದ ಹಾಗೆ ಕಣ್ಣಮುಂದೆ ಬಂದರೆ ಏನು ಮಾಡ್ತೀರಾ?
**ಸುಬ್ಬ:** ಮೊದಲು ಕನ್ಫರ್ಮ್ ಮಾಡ್ಕೊತೀನಿ. ದೇವರು ನನ್ನ ಹತ್ತಿರ ಬಂದಿರೋದಾ, ನಾನೇ ದೇವರ ಹತ್ತಿರ ಹೋದೆನಾ ಅಂತ!

***

**ಕಲ್ಲೇಶಿ:** ಲೋ ಗುಂಡ ನನ್ನ ಕಷ್ಟ ಯಾರತ್ರ ಹೇಳಿಕೊಳ್ಳಲೊ?
**ಮಲ್ಲೇಶಿ:** ಯಾರತ್ರಾನೂ ಹೇಳ್ಕೋಬೇಡ... ವಾಟ್ಸಾಪ್ ಸ್ಟೇಟಸ್‌ಗೆ ಹಾಕ್ಕೋ...

***

**ತಿಮ್ಮಿ:** ಓಡುವುದು ಹೃದಯದ ಆರೋಗ್ಯಕ್ಕೆ ಒಳ್ಳೆಯದಂತೆ.
**ತಿಮ್ಮ:** ಹೌದಾ, ಹಾಗಾದರೆ ನಮ್ಮ ಹೃದಯ ಕಾಪಾಡಿಕೊಳ್ಳೋಕೆ ಓಡಿಹೋಗೋಣ ಬಾ ಪ್ರಿಯೇ...

***

**ತಿಮ್ಮ:** ಲೋ ಗುಂಡ ನಿನ್ನ ಅಮ್ಮನಿಗೂ ನಿನ್ನ ಹೆಂಡತಿಗೂ ಜಗಳ ಆದ್ರೆ ನೀನು ಯಾರ ಪಕ್ಕ ನಿಂತ್ಕೋತೀಯಾ?
**ಗುಂಡ:** ಗೋಡೆ ಪಕ್ಕ ನಿಂತ್ಕೋತೀನಿ...

***

**ಗುಂಡ:** ಅಪ್ಪ, ಪಕ್ಕದ ಮನೆ ತಿಮ್ಮಂಗೆ ಗಂಡು ಮಗು ಆಯ್ತಂತೆ?
**ಅಪ್ಪ:** ಹೌದು, ಅದಕ್ಕೇನೀಗ?
**ಗುಂಡ:** ಮತ್ತೆ ನೀನು, ನಾನು ಚಿಕ್ಕವನಿದ್ದಾಗಿನಿಂದ ಪಕ್ಕದ ಮನೆ ತಿಮ್ಮನ್ನ ನೋಡಿ ಕಲ್ತುಕೋ ಅಂತಿದ್ದಲ್ಲ ಅದಕ್ಕೆ ಹೇಳಿದೆ.

***

**ತಿಮ್ಮ:** ನನ್ನ ತಾತ ಸಾಯೋವಾಗ 300 ಎಕರೆ ಹೊಲ, ಗದ್ದೆ, ಆಸ್ತಿ ಪಾಸ್ತಿ ಬಿಟ್ಟು ಹೋದರು ಗೊತ್ತಾ?
**ಗುಂಡ:** ಅದೇನ್ ಮಹಾ, ನನ್ನ ತಾತ ಸಾಯೋವಾಗ ಇಡೀ ಪ್ರಪಂಚಾನೇ ಬಿಟ್ಟು ಹೋದರು, ಗೊತ್ತಾ?

***

ಗಂಡ ಹೆಂಡತಿ ಇಬ್ಬರೂ ಜಗಳ ಆಡ್ತಿದ್ರು...
**ಗಂಡ:** ಲೇ, ನೀನು ಹಂದಿ.
**ಹೆಂಡತಿ:** ನೀನು ಮುಳ್ಳು ಹಂದಿ...
**ಮಗ:** (ಜಗಳ ನೋಡ್ತಿದ್ದ) ಮಮ್ಮಿ, ಪಪ್ಪಾ ಹಾಗಾದ್ರೆ ನಾನು ಕಾಡು ಹಂದಿನಾ?

ಸಂಗ್ರಹ: ಶರದ ಕುಲಕರ್ಣಿ, ಬೀದರ್

